**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 22-22** **ಪಿಡಬ್ಲ್ಯೂ ಃ <u>3</u>**

**ಸಿಡಬ್ಲ್ಯೂ ಃ <u>3</u>**

ಸಾಕ್ಷಿದಾರರ ಹೆಸರು ಃ ರವಿಕುಮಾರ ಪುಣ್ಯಕೋಟಿ

ತಂದೆ ಹೆಸರು ಃ ಪ್ರಕಾಶ

ವಯಸ್ಸು ಃ 38 ವರ್ಷ

ಉದ್ಯೋಗ ಃ ಪೇಂಟಿಂಗ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 28.09.2021 ರಂದು ಸಂಜೆಃ 5.30 – 6.30 ಗಂಟೆಗೆ ಪೋಲಿಸರು ನಾನು ಹಾಗೂ ಚಾಸಾ-1 ಹಾಗೂ 2 ರವರನ್ನು ಹುಬ್ಬಳ್ಳಿ-ಗದಗ ರೋಡಿನ ರೇಲ್ವೆ ಅಂಡರ ಬ್ರಿಜ್ ಕಡೆಗೆ ಕರೆಸಿ ಅಲ್ಲಿ ಅಪಘಾತ ದ ಕುರಿತು ನಿಪಿ.3 ರಂತೆ ಪಂಚನಾಮೆ ಕ್ರಮ ಜರುಗಿಸಿ ನನ್ನ ಸಹಿ ಪಡೆದಿದ್ದಾರೆ. ನಿಪಿ.4 ಹಾಗೂ 5 ರಂತೆ ಪೊಟೋ ತೆಗೆದಿದ್ದಾರೆ. ಸಾಕ್ಷಿಯೂ ನಿಪಿ.3 ರಲ್ಲಿರುವ ಸಹಿ ಗುರುತಿಸಿದ ಮೇರೆಗೆ ಸಾಕ್ಷಿ ಸಹಿ ನಿಪಿ.3-ಬಿ ಎಂದು ಗುರುತಿಸಲಾಯಿತು. ಮಾರನೇ ದಿನ ಬೆಃ 11 ರಿಂದ 12 ಗಂಟೆಗೆ ಪೋಲಿಸ ಠಾಣೆ ಆವರಣಕ್ಕೆ ನನ್ನನ್ನು ಹಾಗೂ ಚಾಸಾ-2 ರವರನ್ನು ಕರೆಸಿ ನಿಪಿ.6 ರಂತೆ ಅಪಘಾತ ವಾದ ವಾಹನಗಳ ಜಪ್ತ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿದ್ದಾರೆ. ನಿಪಿ.7 ರಂತೆ ಪೊಟೋ ತೆಗೆದಿದ್ದಾರೆ. ಸಾಕ್ಷಿಯೂ ನಿಪಿ.6 ರಲ್ಲಿರುವ ತನ್ನ ಸಹಿ ಗುರುತಿಸಿದ ಮೇರೆಗೆ ಸಾಕ್ಷಿ ಸಹಿ ನಿಪಿ.6-ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ ವಕೀಲರಿಂದಃ**

ನನಗೆ ಓದಲು - ಬರೆಯಲು ಬರುವುದಿಲ್ಲ. ನಾನು ಪೇಂಟಿಂಗ ಕೆಲಸ ಮಾಡುತ್ತೇನೆ. ನಾನು ಬೆಃ 8.30 ಗಂಟೆಗೆ ಹೋಗಿ ಸಂಜೆಃ 5. - 5.30 ವರೆಗೆ ವಾಪಸ್ ಬರುತ್ತೇನೆ. ಮನೆ ಮಂಟೂರ ರೋಡದಲ್ಲಿದೆ.

ಪೋಲಿಸರು ನಿಪಿ.3 ಕ್ಕೆ ಠಾಣೆಯಲ್ಲಿ ಸಹಿ ಮಾಡು ಅಂತಾ ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ ಅಂದರೆ ಸರಿ. ಅದರಲ್ಲಿ ಏನು ಬರೆಯಲಾಗಿದೆ ಅಂದರೆ ಗೊತ್ತಿಲ್ಲ. ಪೋಲಿಸರು ಹೇಳಿದ್ದಕ್ಕೆ ನಿಪಿ.4 ಹಾಗೂ 5 ಕ್ಕೆ ಪೋಟೋಕ್ಕೆ ನಿಂತಿದ್ದೇನೆ. ಇನ್ನೊಂದು ಮಹಜರ ನಿಪಿ.6 ಕ್ಕೆ ಪೋಲಿಸ ಠಾಣೆಯಲ್ಲಿ ಬರೆದು ಇಟ್ಟಿದ್ದಕ್ಕೆ ಸಹಿ ಮಾಡಿದ್ದೇನೆ ಅಂದರೆ ಸರಿ. ನಿಪಿ.7 ಕ್ಕೆ ಹೇಳಿದ್ದಕ್ಕೆ ನಿಂತಿದ್ದೇನೆ ಅಂದರೆ ಸರಿ. ಪೊಟೋ ಏತಕ್ಕೆ ತೆಗೆದಿದ್ದಾರೆ ಅಂದರೆ ಗೊತ್ತಿಲ್ಲ. ನಾನು ನಿಪಿ.3 ಕ್ಕೆ ಠಾಣೆಯಲ್ಲಿ ಸಹಿ ಮಾಡಿದಾಗ ಚಾಸಾ-1 ಹಾಗೂ 2 ರವರು ಇದ್ದರು ಅಂದರೆ ಸರಿ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.